Rotary
ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD


Rtn. Francesco Arezzo
R.I. President


Rtn. K. Palaksha
District Governor

# ಐಶ್ವರ್ಯ

ಸಂಪುಟ: 04 ಸಾಪ್ತಾಹಿಕ ಸಂಚಿಕೆ : 01

ದಿನಾಂಕ: 07.07.2025


Rtn. Anil Kumar
President


Rtn. Krishnappa
Secretary

## ರೋಟರಿ ತಳಹದಿ ಇನ್ನಷ್ಟು ಸವಿಸ್ತಾರವಾಗಬೇಕು – ರೋ. ಮೇಜರ್ ಡೋನರ್ ಬಿ. ಎಮ್. ಭಟ್





ಅಂತರಾಷ್ಟೀಯ ಸಂಸ್ಥೆಯಾಗಿರುವ ರೋಟರಿ ನೂರಿಪತ್ತು ವರ್ಷಗಳಿಂದ ಸಾಕಷ್ಟು ಸಮಾಜಮುಖಿ ಸೇವಾ ಕಾರ್ಯಗಳನ್ನು ಮಾಡುವ ಮೂಲಕ ದೇಶ ವಿದೇಶಗಳಲ್ಲೂ ಜನಮನ್ನಣೆಗಳಿಸಿದೆ, ಪ್ರಖ್ಯಾತಿ ಪಡೆದಿದೆ ಮತ್ತು ಗೌರವವನ್ನೂ ಸಂಪಾದಿಸಿದೆ. ವರ್ಷದಿಂದ ವರ್ಷಕ್ಕೆ ಹೊಸ ಹೊಸ ಕ್ಲಬ್ ಗಳು ಎಲ್ಲೆಡೆ ಆರಂಭವಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅದರಂತೆಯೇ ರೋಟರಿ ಸದಸ್ಯತ್ವವೂ ಹೆಚ್ಚುತ್ತಾ ಹೋಗಬೇಕು. ಉತ್ತಮ ವ್ಯಕ್ತಿಗಳು ಒಂದೆಡೆ ಸೇರಿದಾಗ ಉತ್ತಮ ಕೆಲಸ ಕಾರ್ಯಗಳೂ ನಡೆಯುತ್ತದೆ. ಅವರ TRF ದೇಣಿಗೆಗಳು, ರೋಟರಿ ಸಂಸ್ಥೆಯಿಂದ ದೊರಕುವ ಮ್ಯಾಚಿಂಗ್ ಗ್ರ್ಯಾಂಟ್ ಗಳಿಂದ ಸಮಾಜಕ್ಕೆ ಅತ್ಯುತ್ತಮ ಕೊಡುಗೆಗಳನ್ನು ನೀಡಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಕೆಲಸ ಮಾಡಲು ಸಾಕಷ್ಟು ಅವಕಾಶಗಳಿವೆ ಎಂದು ರೋ. ಮೇಜರ್ ಡೋನರ್ ಬಿ. ಎಮ್. ಭಟ್, 01/07/2025ರಂದು ವೈಷ್ಣವಿ ಸಭಾಭವನದಲ್ಲಿ ನಡೆದ ರೋಟರಿ ಐಸಿರಿ ಪರ್ಕಳ ಕ್ಲಬ್ ನ ನೂತನ ಪದಾಧಿಕಾರಿಗಳ ಪದಪ್ರದಾನ ಸಮಾರಂಭದಲ್ಲಿ ಪದಪ್ರದಾನ ಅಧಿಕಾರಿಯಾಗಿ ಭಾಗವಹಿಸಿ ಈ ಮಾತುಗಳನ್ನು ಹೇಳಿದರು. ಈ ಸಮಾರಂಭದಲ್ಲಿ ರೋಟರಿ ಐಸಿರಿ ಪರ್ಕಳದ ನೂತನ ಅಧ್ಯಕ್ಷರಾಗಿ ರೊ. ಅನಿಲ್ ಕುಮಾರ್ ಮತ್ತು ಕಾರ್ಯದರ್ಶಿಯಾಗಿ ಮಾಜಿ ಯೋಧ ಲ್ಯಾನ್ಸ್ ನಾಯ್ಕ್ ರೊ. ಕೃಷ್ಣಪ್ಪರವರು ಅಧಿಕಾರ ಸ್ವೀಕರಿಸಿದರು. ರೋಟರಿ ಜಿಲ್ಲೆ 3182, ವಲಯ 4ರ ಸಹಾಯಕ ಗವರ್ನರ್ ರೊ. ಅಮಿತ್ ಆರವಿಂದ್ ಮತ್ತು ವಲಯ ಸೇನಾನಿ ರೊ. ಸ್ಮಿತಾ ಜಿ. ಕಾಮತ್, 2024–25ನೇ ಸಾಲಿನ ರೋಟರಿ ಐಸಿರಿ ಅಧ್ಯಕ್ಷ ರೊ. ಸುನೀಲ್ ಕುಮಾರ್ ಮತ್ತು ಕಾರ್ಯದರ್ಶಿ ರೊ. ಪಾಂಡುರಂಗ ಲಾಗ್ವಂಕರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ರೊ. ಗುರುಪ್ರಸಾದ್ ಕಾಮತ್ ಮತ್ತು ರೊ. ರಾಜೇಶ್ ಡಿ. ಶೆಣೈ ಕಾರ್ಯಕ್ರಮ ನಿರೂಪಣೆಗೈದರು. ನೂತನ ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಅಧ್ಯಕ್ಷರಿಗೆ ಕೊರಳ ಲಾಂಛನ ತೊಡಿಸಿದರು. ರೊ. ಡಾ. ಸ್ವಾತಿ ಪೈ ಪ್ರಾರ್ಥನೆಗೈದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಧನ್ಯವಾದ ಸಮರ್ಪಣೆಗೈದರು.

## ರೋಟರಿ ಐಸಿರಿ ನಂಬರ್ ಒನ್ ಸ್ಥಾನಕ್ಕೇರಲಿ...



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ ಪದಪ್ರದಾನ ಸಮಾರಂಭದ ವಿಶೇಷ ಸಂಚಿಕೆ "ಐಶ್ವರ್ಯ" ಪತ್ರಿಕೆಯ ಅನಾವರಣಗೊಳಿಸಿ ಮಾತನಾಡಿದ ವಲಯ 4ರ ಅಸಿಸ್ಟೆಂಟ್ ಗವರ್ನರ್ ರೊ. ಅಮಿತ್ ಅರವಿಂದ್ "ಐಸಿರಿಗೆ ಭೇಟಿ ನೀಡಿದಾಗಲೆಲ್ಲ ನನಗೆ ಪಾಸಿಟಿವ್ ವೈಬ್ಸ್ ಫೀಲ್ ಆಗುತ್ತದೆ. ಇಲ್ಲಿನ ಸದಸ್ಯರ ಕಾರ್ಯ ಚಟುವಟಿಕೆಗಳು, ಶೃದ್ಧೆ, ಸಂಯಮ ಶ್ಲಾಘನೀಯವಾದುದು. ಇಂದಿನ ಪದಪ್ರದಾನ ಸಮಾರಂಭದಲ್ಲಿಯೂ ಸಮವಸ್ತ್ರ ಧರಿಸಿ ಎಲ್ಲರೂ ಸಮಾನ ಮನಸ್ಕರಾಗಿ ಶಿಸ್ತಿನಿಂದ ಅಚ್ಚುಕಟ್ಟಾಗಿ ತಮ್ಮ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಈ ತಂಡಕ್ಕೆ ಇನ್ನಷ್ಟು ಸದಸ್ಯರು ಸೇರ್ಪಡೆಗೊಂಡು ಶಕ್ತಿ ತುಂಬಬೇಕು. 'ಎ' ಅಕ್ಷರದಿಂದ ಆರಂಭವಾಗುವ ರೋಟರಿ ಐಸಿರಿಯು ಎಲ್ಲಾ ವಿಭಾಗಗಳಲ್ಲೂ ನಂಬರ್ ಒನ್ ಆಗಲಿ" ಎಂದು ಶುಭಹಾರೈಸಿದರು. ಮತ್ತು ಐಸಿರಿಯ ಎಲ್ಲಾ ಕಾರ್ಯಚಟುವಟಿಕೆಗಳನ್ನು ಸದಾ ಬೆಂಬಲಿಸುವ ಭರವಸೆ ನೀಡಿದರು.

## ಮಾತೃ ಸಂಸ್ಥೆಯ ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದ ವಲಯ ಸೇನಾನಿ ರೊ. ಸ್ಮಿತಾ ಜಿ. ಕಾಮತ್




ತನ್ನ ಮಾತೃ ಸಂಸ್ಥೆಯ ಪದಪ್ರದಾನ ಸಮಾರಂಭವು ರೋಟರಿ ವರ್ಷಾರಂಭದ ಮೊದಲ ದಿನವೇ ನಡೆಯುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದ ರೊ . ಸ್ಮಿತಾ ಜಿ. ಕಾಮತ್, ತನ್ನನ್ನು ವಲಯ ಸೇನಾನಿಯನ್ನಾಗಿ ನೇಮಿಸಿರುವುದಕ್ಕೆ ಕೃತಜ್ಞತೆ ಸಲ್ಲಿಸಿದರು. ರೋಟರಿ ಐಸಿರಿಯ 2024–25ನೇ ಸಾಲಿನಲ್ಲಿ ಉತ್ತಮ ಕಾರ್ಯ ಚಟುವಟಿಕೆಗಳಿಗಾಗಿ ನಿರ್ಗಮನ ಅಧ್ಯಕ್ಷರಾದ ರೊ ಸುನೀಲ್ ಕುಮಾರ್, ಕಾರ್ಯದರ್ಶಿ ರೊ. ಪಾಂಡುರಂಗ ಲಾಗ್ವಂಕರ್ ಮತ್ತು ತಂಡವನ್ನು ಅಭಿನಂದಿಸಿದರು. ನೂತನ ಅಧ್ಯಕ್ಷ ರೊ. ಅನಿಲ್ ಕುಮಾರ್, ಕಾರ್ಯದರ್ಶಿ ರೊ. ಕೃಷ್ಣಪ್ಪ ಮತ್ತು ತಂಡದ ಎಲ್ಲರಿಗೂ ಅಭಿನಂದಿಸಿ, ಶುಭ ಹಾರೈಸಿದರು.

## ರೋಟರಿ ಐಸಿರಿಗೆ ಇಬ್ಬರು ನೂತನ ಸದಸ್ಯರ ಸೇರ್ಪಡೆ

ರೋಟರಿ ಐಸಿರಿ ಪರ್ಕಳದ ಪದಪ್ರದಾನ ಸಮಾರಂಭ ದಲ್ಲಿ ನೂತನ ಸದಸ್ಯರಾಗಿ ಅಡ್ವೊಕೇಟ್ ಶ್ರೀಯುತ ಸುದರ್ಶನ್ ಎಸ್. ಪೈ



ಮತ್ತು ಸ್ಥಳೀಯ ಉದ್ಯಮಿ ಶ್ರೀಯುತ ಸುಶಾಂತ್ ಕುಮಾರ್ ತೋನ್ಸೆ ಸೇರ್ಪಡೆಗೊಂಡರು. ಇವರನ್ನು ರೊ. ಗೀತಾಶ್ರೀ ಎಂ. ಉಪಾಧ್ಯ ಸಭೆಗೆ ಪರಿಚಯಿಸಿದರು. ಇಬ್ಬರಿಗೂ ಅತಿಥಿಗಳು ರೋಟರಿ ಪಿನ್ ತೊಡಿಸಿ ಸಂಸ್ಥೆಗೆ ಬರಮಾಡಿ ಕೊಂಡರು.

## ರೋಟರಿ ಐಸಿರಿಯಿಂದ ಇಬ್ಬರಿಗೆ ವಿದ್ಯಾರ್ಥಿವೇತನ



ರೊ. ಸುಶೀಲ ಪೂಂಜಾ ಹಾಗೂ ರೊ. ರಾಮಕೃಷ್ಣ ಪೂಂಜಾರವರು ಶ್ರೀಮತಿ ಅಕ್ಷತಾರವರ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ರೂ. 30,000/– ದ ಕೊಡುಗೆಯನ್ನು ಹಸ್ತಾಂತರಿಸಿದರು. ರೋಟರಿ ಐಸಿರಿ ಸ್ಥಾಪಕಾಧ್ಯಕ್ಷ ರೊ. ಪ್ರಭಾಕರ್ ಶೆಟ್ಟಿಯವರು ಪ್ರಸ್ತಾವನೆಗೈದರು.

## ರೋಟರಿ ಐಸಿರಿಯಿಂದ ಕೃಷಿಕರ ಸನ್ಮಾನ



ರೋಟರಿ ಐಸಿರಿಯ ಧ್ಯೇಯ ವಾಕ್ಯ **"ನಮ್ಮ ನಡೆ ಕೃಷಿಯ ಕಡೆ"**. ಇದಕ್ಕೆ ಪೂರಕವಾಗಿ ಕೃಷಿ ಮತ್ತು ಕೃಷಿಕರಿಗೆ ನೆರವಾಗುವ ಕಾರ್ಯಕ್ರಮಗಳನ್ನು ರೋಟರಿ ಐಸಿರಿಯು ಮಾಡುತ್ತಾ ಬಂದಿದೆ. ಈ ಬಾರಿಯ ಪದಪ್ರದಾನ ಸಮಾರಂಭದಲ್ಲಿಯೂ ಇಬ್ಬರು ಪ್ರಗತಿಪರ ಕೃಷಿಕರಾದ ಶ್ರೀಯುತ ಹರಿಶ್ಚಂದ್ರ ಪೂಜಾರಿ, ಮೇಲ್ಮನೆ ಹೆರ್ಗ ಹಾಗೂ ಶ್ರೀಮತಿ ಸುಮತಿ ಪ್ರಭು ಅವರನ್ನು ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು. ರೊ. ಸುಕೇಶ್ ಕುಂದರ್ ರವರು ಈ ಇಬ್ಬರೂ ಮಹನೀಯರ ಸಾಧನೆಯ ಬಗ್ಗೆ ನೆರೆದವರಿಗೆ ಮಾಹಿತಿ ನೀಡಿದರು.

## ಡಾಕ್ಟರ್ಸ್ ಡೇ ಮತ್ತು ಚಾರ್ಟರ್ಡ್ ಅಕೌಂಟೆಂಟ್ಸ್ ಡೇ



ಡಾಕ್ಟರ್ಸ್ ಡೇ ಮತ್ತು ಚಾರ್ಟರ್ಡ್ ಅಕೌಂಟೆಂಟ್ಸ್ ಡೇ ಅಂಗವಾಗಿ ರೋಟರಿ ಐಸಿರಿಯ ಸದಸ್ಯರೂ ಆಗಿರುವ ರೊ. ಡಾ. ಪ್ರಭಾಕರ್ ಯು. ರೆಂಜಾಳ ಮತ್ತು ರೊ. ಡಾ. ಸ್ವಾತಿ ಪೈ ಇವರನ್ನು ವೇದಿಕೆಗೆ ಕರೆದು ಗುರುತಿಸಲಾಯಿತು.

## ಸಂದರ್ಶನ

ರೋಟರಿ ಐಸಿರಿ ಪರ್ಕಳದ ಮೂರನೇ ಅಧ್ಯಕ್ಷರಾಗಿ 2024–25 ರ ರೋಟರಿ ವರ್ಷದಲ್ಲಿ ಕ್ಲಬ್ಬನ್ನು ಯಶಸ್ವಿಯಾಗಿ ಮುನ್ನಡೆಸಿದ ಸಂತೃಪ್ತ ಭಾವದಲ್ಲಿರುವ ರೊ. ಸುನೀಲ್ ಕುಮಾರ್ ಅವರನ್ನು ಅವರ ಮನೆಯಲ್ಲಿಯೇ ಮಡದಿ ರೂಪಶ್ರೀ ಮೇಡಂ ಮತ್ತು ಸುಪುತ್ರ ಆರವ್ ಜೊತೆಯಲ್ಲಿ ಸಂದರ್ಶಿಸುವ ಅವಕಾಶ ನನಗೆ ದೊರೆಯಿತು.



**ನಮಸ್ಕಾರ ಸರ್,**

**ಅಧ್ಯಕ್ಷರಾಗಿ ಒಂದು ವರ್ಷವನ್ನು ಯಶಸ್ವಿಯಾಗಿ ಪೂರೈಸಿದ್ದೀರಿ... ನಿಮಗೀಗ... ಹೇಗೆ ಅನ್ನಿಸುತ್ತಿದೆ..?**

"ಅಧ್ಯಕ್ಷರಾಗಿ ಯಶಸ್ವಿಯಾಗಿ ಪೂರ್ಣಗೊಳಿಸಿದ ಮೇಲೆ ಮನಸ್ಸಿಗೆ ತುಂಬಾ ತೃಪ್ತಿ ಆಗಿದೆ. ಇದು ನನ್ನ ಜೀವನದ ಒಂದು ಅಮೂಲ್ಯ ಅನುಭವವಾಗಿತ್ತು. ಈ ಅವಧಿಯಲ್ಲಿ ನಾನು ನಾನೇನು ಸಾಧಿಸಬಹುದು, ನಮ್ಮ ತಂಡ ಏನು ಮಾಡಬಹುದು… ಎಂಬುದನ್ನು ಅರ್ಥಮಾಡಿಕೊಂಡೆ. ಕೆಲವೊಂದು ಸವಾಲುಗಳು ಇದ್ದರೂ, ಸದಸ್ಯರ ಸಹಕಾರ ಮತ್ತು ಪ್ರೋತ್ಸಾಹದಿಂದ ನಾವು ಅವುಗಳನ್ನು ಎದುರಿಸಿ ಮುನ್ನಡೆದವು. ಅಂತಿಮವಾಗಿ, ನಾನು ಈ ಹೊಣೆಗಾರಿಕೆಯನ್ನು ನಿಷ್ಠೆಯಿಂದ ನಿರ್ವಹಿಸಿದ್ದೇನೆ ಎಂಬ ಭರವಸೆಯಿಂದ ನನಗೆ ಹೆಮ್ಮೆಯೂ ಆಗಿದೆ".

**ಮೊದಲ ಬಾರಿ ಅಧ್ಯಕ್ಷ ಹುದ್ದೆಗೆ ನಿಮ್ಮ ಹೆಸರು ಪ್ರಸ್ತಾವನೆ ಆದಾಗ, ಏನನ್ನಿಸಿತ್ತು ಮನದಲ್ಲಿ....**

ನನ್ನನ್ನು ಅಧ್ಯಕ್ಷರಾಗಲು ಕೇಳಿದಾಗ ನನಗೆ ತುಂಬಾ ಆಶ್ಚರ್ಯವೂ, ಗಾಬರಿಯೂ ಆಯಿತು. ನಾನು ಸಿದ್ಧನಾಗಿದ್ದೇನೇ ಇಲ್ಲವೇ ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡಿತು. ಆದರೂ, ನನಗೆ ಮೆಚ್ಚುಗೆ ವ್ಯಕ್ತಪಡಿಸಿ, ನನ್ನ ಮೇಲೆ ವಿಶ್ವಾಸವಿಟ್ಟವರ ನಂಬಿಕೆಗೆ ನಾನು ಅರ್ಹನಾಗಬೇಕು ಎಂಬ ಭಾವನೆಯಿಂದ ಧೈರ್ಯದಿಂದ ಹೊಣೆಗಾರಿಕೆಯನ್ನು ಸ್ವೀಕರಿಸಿದೆ ಮತ್ತು ಅದು ನನ್ನ ಜೀವನದ turning point ಆಗಿಬಿಟ್ಟಿತು.

**ನಿಮ್ಮ ಅವಧಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಮಾಡಿದ್ದೀರಿ.... ನಿಮಗೆ ಅತ್ಯಂತ ಸಂತೋಷ ಮತ್ತು ಸಂತೃಪ್ತಿ ಕೊಟ್ಟ ಒಂದೆರಡು ಕಾರ್ಯಕ್ರಮಗಳು ಯಾವುವು ಸರ್?**

1. ಆರೋಗ್ಯ ಶಿಬಿರದ ಮೂಲಕ ಒಬ್ಬರಿಗೆ ಸುಮಾರು ಮೂವತ್ತು ಸಾವಿರ ವೆಚ್ಚದ ಚಿಕಿತ್ಸೆಯನ್ನು ಉಚಿತವಾಗಿ ಅರ್ಹ ವ್ಯಕ್ತಿ ಸಿಗುವಂತೆ ಮಾಡಿದ್ದು.
2. Aadhaar Card ತಿದ್ದುಪಡಿಯನ್ನು ಸುಲಭವಾಗಿ ತ್ವರಿತಗತಿಯಲ್ಲಿ ಆಗುವಂತೆ ಮಾಡಿದ್ದು, ಅಲ್ಲದೆ ಅವಶ್ಯಕತೆ ಇದ್ದವರ ಮನೆಗೇ ಹೋಗಿ ಸೇವೆ ಸಲ್ಲಿಸಿದ್ದು, ಸಾರ್ಥಕ ಅನಿಸಿತು.

**ನಿಮ್ಮ ಉದ್ಯೋಗ, ಕುಟುಂಬ ಮತ್ತು ರೋಟರಿಯ ಅಧ್ಯಕ್ಷತೆ – ಈ ಮೂರನ್ನೂ ಹೇಗೆ ನಿಭಾಯಿಸಿದಿರಿ ಸರ್ ?**

ರೋಟರಿ,ಉದ್ಯೋಗ ಮತ್ತು ಕುಟುಂಬ ಜವಾಬ್ದಾರಿಗಳನ್ನು ಸಮತೋಲನಗೊಳಿಸುವುದು ನಿಜಕ್ಕೂ ಸವಾಲಿನ ಸಂಗತಿಯಾಗಿತ್ತು. ಆದರೆ, ಸಮಯ ನಿರ್ವಹಣೆ, *(ಮುಂದಿನ ಪುಟಕ್ಕೆ)*

## ಸಂದರ್ಶನ *(ಹಿಂದಿನ ಪುಟದಿಂದ)*

ಪ್ರಾಮುಖ್ಯತೆಗಳನ್ನು ನಿಶ್ಚಯಿಸುವುದು ಹಾಗೂ ಪ್ರತಿಕ್ಷಣವನ್ನು ಸದುಪಯೋಗ ಪಡಿಸಿಕೊಳ್ಳುವುದು ನನಗೆ ಸಹಾಯ ಮಾಡಿತು. ನನ್ನ ಕುಟುಂಬದ ಸಹಕಾರ ಮತ್ತು ನನ್ನ ಸಹೋದ್ಯೋಗಿಗಳ ಸಹಾನುಭೂತಿಯೂ ಈ ಸಮತೋಲನಕ್ಕೆ ಸಹಾಯ ಮಾಡಿದವು. ಎಲ್ಲವನ್ನು ನಿಷ್ಠೆಯಿಂದ ನಿರ್ವಹಿಸಲು ನಾನು ಪ್ರಯತ್ನಿಸುತ್ತಿದ್ದೆ.

**ನಿಮ್ಮ ಅವಧಿಯಲ್ಲಿ ಅತ್ಯಂತ ಚಾಲೆಂಜಿಂಗ್ ಅಂತ ಅನಿಸಿದ ಘಟನೆ ಅಥವಾ ಕಾರ್ಯಕ್ರಮ ಯಾವುದು...?**

DG Visit ಕಾರ್ಯಕ್ರಮವನ್ನು ಅನಿವಾರ್ಯ ಕಾರಣದಿಂದ ಮುಂದೂಡ ಬೇಕಾಗಿತ್ತು. ಆದರೆ ಒಂದು ದಿನವನ್ನು ನಿಗದಿ ಮಾಡುವುದೇ ಕಠಿಣ ವಿಷಯ ಆಗಿತ್ತು. ಎಲ್ಲಾ ಸದಸ್ಯರಿಗೂ ಅನುಕೂಲಕರ ಆಗಬಹುದಾದ ಒಂದು ದಿನ ಆಯ್ಕೆ ಮಾಡುವುದು ಸುಲಭದ ವಿಚಾರವಲ್ಲ. ಆದಾಗ್ಯೂ DG Visit ನಲ್ಲಿ 100% ಹಾಜರಾತಿ ಆಗಿದ್ದು, ಬಹಳ ಸಂತೃಪ್ತಿ ನೀಡಿದೆ. DG Visit ದಿನ ಕೈಗೊಂಡ ಅತ್ಯುತ್ತಮ ಪ್ರಾಜೆಕ್ಟ್ ಗಳು, ಸಮಯಕ್ಕೆ ಸರಿಯಾಗಿ ಕಾರ್ಯಕ್ರಮ ಮುಗಿಸಿದ್ದು, ಅತ್ಯಂತ ಖುಷಿ ಮತ್ತು ಹೆಮ್ಮೆಯ ಕ್ಷಣ.

**ರೋಟರಿ ಸಂಸ್ಥೆಗೆ ಸೇರಿದ ಬಳಿಕ, ಅದರಲ್ಲೂ ವಿಶೇಷವಾಗಿ, ಈ ಒಂದು ವರ್ಷದ ಅಧ್ಯಕ್ಷತೆಯಿಂದ ವೈಯುಕ್ತಿಕ ನೆಲೆಯಲ್ಲಿ ನಿಮಗಾದ ಲಾಭ ಅಥವಾ ನಿಮ್ಮ ಮೇಲಾದ ಪರಿಣಾಮ ಏನು...**

ರೋಟರಿ ಸಂಸ್ಥೆಯಿಂದ ನನಗೆ ಹಲವಾರು ವೈಯಕ್ತಿಕ ಲಾಭಗಳಾಗಿವೆ. ಮುಖ್ಯವಾಗಿ, ಇದು ನನ್ನಲ್ಲಿನ ನೇತೃತ್ವ ಗುಣವನ್ನು ಬೆಳಸಿದೆ. ನಾನು ಹಲವಾರು ಜನರೊಂದಿಗೆ ಸಂಪರ್ಕ ಹೊಂದಿ, ಅವರೊಂದಿಗೆ ಕೆಲಸ ಮಾಡುವುದರಿಂದ ಸಂವಹನ ಕೌಶಲ್ಯಗಳು ಬೆಳೆದವು. ಸಮಯ ನಿರ್ವಹಣೆ, ತಂಡ ನಿರ್ವಹಣೆ ಮತ್ತು ಸಂಘಟನಾ ಶಕ್ತಿಗಳಲ್ಲಿ ನನಗೆ ಸಾಕಷ್ಟು ನೈಪುಣ್ಯತೆ ಬಂದಿದೆ. ಜೊತೆಗೆ, ಸೇವೆಯ ಸಂತೋಷವೇ ಬಹುಮಹತ್ತರ ಲಾಭ. ಅನ್ಯರಿಗೆ ಸಹಾಯ ಮಾಡಿದಾಗ ಮನಸ್ಸಿಗೆ ಲಭಿಸುವ ತೃಪ್ತಿ ಅಪ್ರತಿಮ. ಇಂತಹ ಸೇವಾ ಚಟುವಟಿಕೆಗಳಲ್ಲಿ ಭಾಗವಹಿಸಿದ ಕಾರಣ ಸಮಾಜದ ಬಗ್ಗೆ ಜವಾಬ್ದಾರಿಯುತ ದೃಷ್ಟಿಕೋಣ ಬೆಳೆದಿದೆ. ಅಂತೆಯೇ, ರೋಟರಿಯು ವಿವಿಧೆಡೆ, ವಿವಿಧ ವ್ಯಕ್ತಿಗಳನ್ನು, ನಾಯಕರನ್ನು ಪರಿಚಯಿಸುವ ಮೂಲಕ ನನ್ನ ಜನಸಂಪರ್ಕ ಜಾಲವನ್ನೂ ವಿಸ್ತರಿಸಿದೆ. ಹೀಗಾಗಿ, ರೋಟರಿ ನನ್ನ ವ್ಯಕ್ತಿತ್ವದ ಬೆಳವಣಿಗೆಯಲ್ಲಿಯೂ, ಸಮಾಜಮುಖಿಯಾಗಿ ಬೆಳೆವ ದಿಕ್ಕಲ್ಲಿಯೂ ಮಹತ್ವದ ಪಾತ್ರವಹಿಸಿದೆ.

**ರೂಪಶ್ರೀ ಮೇಡಂ, ರೋಟೇರಿಯನ್ ಸುನಿಲ್ ಕುಮಾರ್ ಸರ್ ಅವರ ಅಧ್ಯಕ್ಷತೆಯ ಅವಧಿಯ ಬಗ್ಗೆ ನಿಮ್ಮ ಅನಿಸಿಕೆಗಳು ಪ್ಲೀಸ್.....**

It has been a proud and fulfilling experience to witness my husband serve as the President in Aisiri Parkala for the year 2024–25. This journey has truly helped him grow both professionally and personally, especially in his ability to connect with people from all walks of life. I've seen him become more confident in communicating, more open to listening, and more comfortable engaging with diverse groups. His dedication throughout the year was truly inspiring — he spent many sleepless nights planning and preparing for various programs and events. With the unwavering support of all the members, he successfully completed his tenure, leaving behind a meaningful impact and many cherished memories.

ನಿಮ್ಮ ಸಮಯಕ್ಕಾಗಿ ಧನ್ಯವಾದಗಳು.

## ರೋಟರಿ ಐಸಿರಿಯ "ಐಶ್ವರ್ಯ" ಕ್ಲಬ್ ಬುಲೆಟಿನ್ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ ಪದಪ್ರದಾನ ಸಮಾರಂಭದ ವಿಶೇಷ ಸಂಚಿಕೆ "ಐಶ್ವರ್ಯ" ಪತ್ರಿಕೆಯನ್ನು ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ ಅವರು ಬಿಡುಗಡೆಗೊಳಿಸಿದ ಕ್ಷಣ.

## ಇಂಟರಾಕ್ಟ್ ಕ್ಲಬ್ ಪದಪ್ರದಾನ ಸಮಾರಂಭ



ಶಾಂತಿನಿಕೇತನ ಆಂಗ್ಲ ಮಾಧ್ಯಮ ಶಾಲೆ, ಅಲೆವೂರು ಇದರ 2025–26ನೇ ಸಾಲಿನ ಇಂಟರಾಕ್ಟ್ ಕ್ಲಬ್ ಪದಪ್ರದಾನ ಸಮಾರಂಭವು 02/07/2025 ರಂದು ಬೆಳಿಗ್ಗೆ ಘಂಟೆ 10.00ಕ್ಕೆ ಶಾಲಾ ಸಭಾಭವನದಲ್ಲಿ ಜರುಗಿತು.

## ಶೆಟ್ಟಿಬೆಟ್ಟು ಶಾಲಾ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಶಿಕ್ಷಣ ದಿಕ್ಸೂಚಿ



ರೋಟರಿ ಐಸಿರಿಯು ಸತತ ಎರಡನೇ ಬಾರಿಗೆ ಶೆಟ್ಟಿಬೆಟ್ಟು ಸರಕಾರಿ ಸಂಯುಕ್ತ ಪ್ರೌಢಶಾಲೆಯ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಪ್ರಜಾವಾಣಿ ಶಿಕ್ಷಣ ದಿಕ್ಸೂಚಿಯ ವಾರ್ಷಿಕ ಚಂದಾದಾರಿಕೆಯನ್ನು ಕೊಡುಗೆಯಾಗಿ ನೀಡಿತು. *(ವಿವರಗಳು ಮುಂದಿನ ಸಂಚಿಕೆಯಲ್ಲಿ)*